# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1150**
ಸದಸ್ಯರ ಹೆಸರು :ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : **28.12.2022.**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ಕಸಬ ಹೋಬಳಿಯ ಚೋಳಪ್ಪನಹಳ್ಳಿ ಗ್ರಾಮದ ಹಳೇ ಸರ್ವೆ ನಂ.80ಕ್ಕೆ ಸಂಬಂಧಿಸಿದಂತೆ ಜಮೀನಿನಲ್ಲಿ ಪೋಡಿ ಇಂಡೀಕರಣ ಮಾಡುವ ಸಮಯದಲ್ಲಿ ಮಂಜೂರಾದ ಜಮೀನು ವಿಸ್ತೀರ್ಣದಲ್ಲಿ ಕಡಿತಗೊಳಿಸಿರುವುದನ್ನು ಪುನಃ ತಿದ್ದುಪಡಿ ಮಾಡುವ ಬಗ್ಗೆ ಪುನರೀಕ್ಷಣೆ ಅರ್ಜಿ (ಹೊ) ಸಂಖ್ಯೆ ಆರ್.ಪಿ/135/2022 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಚಾಲ್ತಿಯಲ್ಲಿದ್ದು; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಉಪವಿಭಾಗಾಧಿಕಾರಿ ದೊಡ್ಡಬಳ್ಳಾಪುರ ಉಪವಿಭಾಗ ರವರ ಆದೇಶ ಕ್ರಮಾಂಕ ಆರ್.ಎ (ಹೆಚ್)38/2020, ದಿನಾಂಕ: 13.07.2022ರ ಆದೇಶವನ್ನು ಪ್ರಶ್ನಿಸಿ, ಶ್ರೀ ತಿಮ್ಮರಾಯಪ್ಪ ಬಿನ್ ಹನುಮಂತಪ್ಪ ರವರು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ರಿವಿಷನ್ ಅರ್ಜಿ ಸಂಖ್ಯೆ 135/2022ನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣವನ್ನು ವಿಚಾರಣೆಗೆ ಅಂಗೀಕರಿಸಿದೆ. ಪ್ರಕರಣವು ವಿಚಾರಣಾ ಹಂತದಲ್ಲಿದ್ದು, ಅರ್ಜಿದಾರರಿಗೆ ತಮ್ಮ ಕೋರಿಕೆಯನ್ನು ಸಮರ್ಥಿಸಿಕೊಳ್ಳಲು ಕಾಲಾವಕಾಶ ನೀಡಲಾಗಿದೆ. ಸದರಿ ಪ್ರಕರಣದ ಮುಂದಿನ ವಿಚಾರಣೆಯು ದಿನಾಂಕ: 13.01.2023ಕ್ಕೆ ನಿಗದಿಯಾಗಿರುತ್ತದೆ. |
| ಆ) | ಪೋಡಿ ಇಂಡೀಕರಣ ಸಮಯದಲ್ಲಿ ಮಂಜೂರಾದ 1 ಎಕರೆ 20 ಗುಂಟೆ ಬದಲಿಗೆ 10 ಗುಂಟೆ ಪಹಣಿಯಲ್ಲಿ ದಾಖಲಿಸಲಾಗಿದ್ದು ಬಾಧಿತ ಮಂಜೂರುದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು ಮಂಜೂರಾದ ಪ್ರಮಾಣದಲ್ಲಿ ಜಮೀನು ಲಭ್ಯವಿದ್ದು ಮತ್ತು ಅನುಭವದಲ್ಲಿರುವುದರಿಂದ ಸದರಿ ಕಡತದಲ್ಲಿನ ಅರ್ಜಿದಾರರಿಗೆ ಮಂಜೂರಾಗಿರುವ 1 ಎಕರೆ 20 ಗುಂಟೆ ವಿಸ್ತೀರ್ಣಕ್ಕೆ ತಿದ್ದುಪಡಿ ಮಾಡಿ ಜಮೀನು ಪಹಣಿಯಲ್ಲಿ ದಾಖಲಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? (ಸಂಪೂರ್ಣ ಮಾಹಿತಿ ಒದಗಿಸುವುದು) | ಅರ್ಜಿದಾರರು ಸಲ್ಲಿಸಿರುವ ಪ್ರಕರಣವು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದು, ಅರ್ಜಿದಾರರು ಕೋರಿಕೆಗೆ ಸಂಬಂಧಿಸಿದಂತೆ ಲಿಖಿತ ವಾದ ಹಾಗೂ ದಾಖಲೆಗಳನ್ನು ಹಾಜರು ಪಡಿಸಿದ ನಂತರ ಅರ್ಹತೆ ಆದೇಶವನ್ನು ಹೊರಡಿಸಲಾಗುವುದು. |

ಸಂಖ್ಯೆ: ಆರ್‌ಡಿ 304 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು